485(1101)ಶ್ರೀ ಎಂ.ಶ್ರೀನಿವಾಸ್(ಮಂಡ್ಯ) ಮಾನ್ಯ ಸಕ್ಕರೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮೈಸೂರು ಸಕ್ಕರೆ ಕಂಪನಿ ನಿಯಮಿತ ಮಂಡ್ಯದಲ್ಲಿ 2002–03 ಮತ್ತು 2003–04ರ ಸಾಲುಗಳಲ್ಲಿ ಮಾರಾಟ ಮಾಡಲಾದ ಸಕ್ಕರೆಯನ್ನು ಯಾವ ಸಾಲುಗಳಲ್ಲಿ ಉತ್ಪಾದಿಸಲಾಗುತ್ತದೆ?

ಆ) ಸಕ್ಕರೆಯನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರುವ ಮುನ್ನ ಮಾರುಕಟ್ಟೆಯಲ್ಲಿ ಧರವನ್ನು ಅವಲೋಕಿಸಿ ಮಾರಾಟ ಮಾಡಲಾಗುವ ಕ್ರಮವನ್ನು ಅನುಸರಿಸಲಾಗುವುದೇ ಹಾಗಿದ್ದಲ್ಲಿ ಅನುಸರಿಸುವ ಕ್ರಮಗಳೇನು?

ಇ) ಪ್ರತ್ಯೇಕವಾಗಿ 2001–02 ಹಾಗೂ 2002–03 ರ ಸಾಲಿನಲ್ಲಿ I ಕ್ವಿಂಟಾಲ್ ಸಕ್ಕರೆ ಉತ್ಪಾದಿಸಲು ಎಷ್ಟು ಟನ್ ಕಬ್ಬು ಬಳಕೆ ಮಾಡಲಾಗಿದೆ; ಸದರಿ ಪ್ರಮಾಣ ಕಬ್ಬಿನ ಬಾಬ್ತು ಎಷ್ಟು ಹಣ ಪಾವತಿ ಮಾಡಲಾಗಿದೆ.

ಈ) 2002ನೇ ಡಿಸೆಂಬರ್‌ನಿಂದ 2003ನೇ ಆಗಸ್ಟ್ ವರೆವಿಗೆ ಸಕ್ಕರೆ ಮಾರಾಟದ ಟೆಂಡರ್ ಪ್ರಕ್ರಿಯೆಯಲ್ಲಿ ಮುಕ್ತ ಮಾರುಕಟ್ಟೆ ಹಾಗೂ ರಪ್ತು ಮಾರಾಟ ವಹಿವಾಟುವಿನಲ್ಲಿ ಪಾರದರ್ಶಕ ಕಾಯ್ದೆಯನ್ನು ಉಲ್ಲಂಘನೆ ಮಾಡಲಾಗಿದೆಯೇ, ಹಾಗಿದ್ದಲ್ಲಿ ಪ್ರಕರಣಗಳು ಎಷ್ಟು?

ಶ್ರೀ ಅಮರೇಗೌಡ.ಎಲ್.ಪಾಟೀಲ ಬಯ್ಯಾಪುರ (ಸಕ್ಕರೆ ಸಚಿವರು) :

ಅ) 2002–03 ಮತ್ತು 2003–04ರ ಸಾಲುಗಳಲ್ಲಿ ಮಾರಾಟ ಮಾಡಲಾದ ಸಕ್ಕರೆಯನ್ನು 2001–02, 2002–03 ಮತ್ತು 2003–04ರ ಸಾಲುಗಳಲ್ಲಿ ಉತ್ಪಾದಿಸಲಾಗಿದೆ.

ಆ) ಸಕ್ಕರೆಯನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರುವ ಮುನ್ನ ಮಾರುಕಟ್ಟೆಯಲ್ಲಿನ ದರವನ್ನು ಅವಲೋಕಿಸಿ ಮಾರಾಟ ಮಾಡುವಾಗ ಈ ಕೆಳಗಿನ ಕ್ರಮಗಳನ್ನು ಅನುರಿಸಲಾಗುತ್ತಿದೆ.

1) ಸಕ್ಕರೆ ಕಂಪನಿಗಳಿಂದ ಮುಕ್ತ ಸಕ್ಕರೆಯನ್ನು ಎತ್ತುವಳಿ ಮಾಡುವ ಬಗ್ಗೆ ಸರ್ಕಾರದಿಂದ ಪರವಾನಗಿಯನ್ನು ಹೊಂದಿರುವ (ಮೆಂಬರಷಿಪ್) ಸಕ್ಕರೆ ವ್ಯಾಪಾರಿಗಳಿಗೆ ಟೆಂಡರಿನಲ್ಲಿ ಭಾಗವಹಿಸಲು ಅನುಮತಿಯನ್ನು ನೀಡಲಾಗುವುದು.

2) ಲೈಸನ್ಸ್ ಹೊಂದಿರುವ ವ್ಯಾಪಾರಿಗಳಿಂದ ಇ.ಎಂ.ಡಿ ಹಣವನ್ನು ಬ್ಲಾಂಕ್ ಚೆಕ್ ಮುಖಾಂತರ ಪಡೆದು ನಂತರ ಅವರಿಗೆ ಟೆಂಡರಿನಲ್ಲಿ ಭಾಗವಹಿಸಲು ಅನುಮತಿಯನ್ನು ನೀಡಲಾಗುವುದು.

3) ಸಕ್ಕರೆ ದಲ್ಲಾಳಿಗಳಿಗೆ ಟೆಂಡರ್ ಫಾರಂನ್ನು ವಿತರಿಸಿ, ನಂತರ ಅವರು ದರವನ್ನು ನಮೂದಿಸಿ ಫಾರ್ಕ್ ಮಾಡಿದ ಟಂಡರ್ ಫಾರಂಗಳ ಲಕೋಟೆಗಳನ್ನು ವ್ಯವಸ್ಥಾಪಕ ನಿರ್ದೇಶಕರ ಹಾಗೂ ವ್ಯಾಪಾರಿಗಳ ಸಮ್ಮುಖದಲ್ಲಿ ತೆರೆದು, ಅವರು ನಮೂದಿಸಿರುವ ಧರಗಳನ್ನು ಓದಿ ತಿಳಿಸಲಾಗುವುದು ಮತ್ತು ದಾಖಲಿಸಲಾಗುವುದು.

4) ಮುಕ್ತ ಮಾರುಕಟ್ಟೆಯ ಸಕ್ಕರೆ ದರವನ್ನು ಪರಿಶೀಲಿಸಿ ಹೆಚ್ಚಿನ ದರವನ್ನು ನಮೂದಿಸಿದವರಿಗೆ ವ್ಯವಸ್ಥಾಪಕ ನಿರ್ದೇಶಕರ ಆದೇಶದ ಮೇರೆಗೆ ಸಕ್ಕರೆಯನ್ನು ಹಂಚಿಕೆ ಮಾಡಲಾಗುವುದು.

5) ಅವರು ಖರೀದಿಸುವ ಪ್ರಮಾಣದಷ್ಟು ಸಕ್ಕರೆಯನ್ನು ನಿಗದಿತ ದಿನಾಂಕದೊಳಗೆ ಪೂರ್ಣ ಪ್ರಮಾಣವನ್ನು ಎತ್ತುವಳಿ ಮಾಡದಿದ್ದ ಪಕ್ಷದಲ್ಲಿ, ಅದರಿಂದ ಆಗುವ ನಷ್ಟದ ಮೊತ್ತವನ್ನು ಅವರಿಂದ ಪಡೆದಿರುವ ಬ್ಲಾಂಕ್ ಚೆಕ್‌ನಲ್ಲಿ ನಮೂದಿಸಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಇ) 2001–02ನೇ ಸಾಲಿನಲ್ಲಿ 1 ಕ್ವಿಂಟಾಲ್ ಸಕ್ಕರೆಯನ್ನು ಉತ್ಪಾದಿಸಲು 1.048 ಎಂ.ಟಿ. ಕಬ್ಬು ಬಳಕೆ ಮಾಡಲಾಗಿದೆ. ಸದರಿ ಕಬ್ಬಿನ ಬಾಬ್ತು ರೂ. 922–00ಗಳಂತೆ 1.048 ಮೆಟ್ರಿಕ್ ಟನ್‌ಗೆ ಪಾವತಿ ಮಾಡಲಾಗಿದೆ. (ಕಬ್ಬಿನ ತೆರೆಗೆ ಹೊರತು ಪಡಿಸಿ)

2002–03ನೇ ಸಾಲಿನಲ್ಲಿ 1 ಕ್ವಿಂಟಾಲ್ ಸಕ್ಕರೆಯನ್ನು ಉತ್ಪಾದಿಸಲು 1.099 ಎಂ.ಟಿ. ಕಬ್ಬು ಬಳಕೆ ಮಾಡಲಾಗಿದೆ. ಸದರಿ ಕಬ್ಬಿನ ಬಾಬ್ತು ರೂ. 889–00 ಗಳಂತೆ 1.099 ಮೆಟ್ರಿಕ್ ಟನ್‌ಗೆ ಪಾವತಿ ಮಾಡಲಾಗಿದೆ. (ಕಬ್ಬಿನ ತೆರೆಗೆ ಹೊರತು ಪಡಿಸಿ).

ಈ) 2002 ಡಿಸೆಂಬರ್ ದಿಂದ 2003 ಆಗಸ್ಟ್ ವರೆವಿಗೆ ಸಕ್ಕರೆ ಮಾರಾಟದ ಟೆಂಡರ್ ಪ್ರಕ್ರಿಯೆಯಲ್ಲಿ ಮುಕ್ತ ಮಾರುಕಟ್ಟೆ ಹಾಗೂ ರಫ್ತು ಮಾರಾಟ ವಹಿವಾಟುವಿನಲ್ಲಿ ಪಾರದರ್ಶಕ ಕಾಯ್ದೆಯನ್ನು ಉಲ್ಲಂಘಿಸಿರುವುದಿಲ್ಲ.

487(910) ಶ್ರೀ ರಾಮರೆಡ್ಡಿ.ಜಿ. ವಿ(ಬಾಗೇಪಲ್ಲಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದ ಬಾಲಕ ಬಾಲಕೀಯರ ವಸತಿ ನಿಲಯಗಳಿಗೆ ಪ್ರತಿ ವರ್ಷ ಅರ್ಹ ಪ್ರವೇಶಾಕಾಂಕ್ಷಿಗಳ ಸಂಖ್ಯೆ ಏರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಪ್ರಸ್ತುತ ವರ್ಷ ಹೊಸ ವಿದ್ಯಾರ್ಥಿ ನಿಲಯಗಳನ್ನು ಮಂಜೂರು ಮಾಡಲು ಉದ್ದೇಶಿಸಿದೆಯೆ;

ಇ) ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು

ಆ) 2003–04ನೇ ಸಾಲಿನ ಆಯವ್ಯಯ ಭಾಷಣದ ಘೋಷಣೆಯನ್ವಯ ಉತ್ತರ ಕರ್ನಾಟಕದ ಏಳು ಹಿಂದುಳಿದ ಜಿಲ್ಲೆಗಳಿಗೆ ಈ ಸಾಲಿನಲ್ಲಿ 75 ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ಯಾವುದೇ ಹೊಸ ವಿದ್ಯರ್ಥಿನಿಲಯ ಮಂಜೂರು ಮಾಡಲಾಗುವುದಿಲ್ಲ.

ಇ) ಉದ್ಭವಿಸುವುದಿಲ್ಲ.

488(911) : ಶ್ರೀರಾಮ ರೆಡ್ಡಿ ಜಿ.ವಿ (ಬಾಗೇಪಲ್ಲಿ) ಮಾನ್ಯ ಪಶುಸಂಗೋಪನೆ ಮತ್ತು ವಕ್ಫ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಗ್ರಾಮೀಣ ಭಾಗದ ಪಶುವೈದ್ಯಕೀಯ ಆಸ್ಪತ್ರೆಗಳಲ್ಲಿ ವೈದ್ಯರ ತೀವ್ರ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಖಾಲಿಯಿರುವ ಪಶುವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ.

ಅ) ಬಂದಿದೆ.

ಶ್ರೀ ಮಿರಾಜುದ್ದೀನ್ ಎನ್. ಪಾಟೀಲ್ (ಪಶುಸಂಗೋಪನೆ ಮತ್ತು ವಕ್ಫ ಸಚಿವರು) :

1. 250 ಪಶುವೈದ್ಯಾಧಿಕಾರಿಗಳನ್ನು ವಿಶೇಷ ನೇರ ನೇಮಕಾತಿ ನಿಯಮ ಮೂಲಕ ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ.